# ತಂತ್ರಜ್ಞಾನದ ಸೊಲ್ಲು; ತಾಯ್ನುಡಿಯ ಘಮಲು



**ವಸಂತ್ ಶೆಟ್ಟಿ,**
ಲೇಖಕ, ಕನ್ನಡ ನುಡಿಚಿಂತಕರು

ಕರ್ನಾಟಕದ ಇತಿಹಾಸದಲ್ಲಿ, ಭಾಷಾ ವಿಷಯದಲ್ಲಿ ಅತ್ಯಂತ ಪ್ರಮುಖ ಬದಲಾವಣೆ ಕಂಡುಬರುವುದು 90ರ ದಶಕದಲ್ಲಿ. ಆ ಅವಧಿಯಲ್ಲಿ ಎರಡು ದೊಡ್ಡ ಮಟ್ಟದ ಬೆಳವಣಿಗೆಗಳಾದವು. ಮೊದಲನೆಯದು, ಜನರ ವಲಸೆ ಹೆಚ್ಚಾದದ್ದು ಭಾಷೆಯ ಬಗೆಗಿನ ಅಭದ್ರತೆ, ಕಳವಳ ಹೆಚ್ಚಲು ಕಾರಣವಾಯಿತು. ನಗರ ಪ್ರದೇಶಗಳಲ್ಲಿ ಇದರ ಪರಿಣಾಮ ಹೆಚ್ಚಾಗಿ ಗೋಚರಿಸಿತು.

ಎರಡನೆಯದು, ತಂತ್ರಜ್ಞಾನದ ಆವಿಷ್ಕಾರಗಳು. ಜಾಗತೀಕರಣದ ಮತ್ತೊಂದು ಆಯಾಮದಂತೆ, ಅತ್ಯಂತ ವೇಗವಾಗಿ ಆದ ತಾಂತ್ರಿಕ ಬದಲಾವಣೆಗಳಿಂದ ಭಾಷೆಯ ಬಳಕೆಯ ಸಾಧ್ಯತೆಗಳು ದೊಡ್ಡ ಮಟ್ಟದಲ್ಲಿ ಸಿಕ್ಕಿದವು. ಮೊಬೈಲ್ ಫೋನ್, ಸ್ಮಾರ್ಟ್ ಫೋನ್, ಸಾಮಾಜಿಕ ಜಾಲತಾಣಗಳು, ಇ–ಕಾಮರ್ಸ್ ಪ್ರಚಲಿತಗೊಂಡವು. ಆದರೆ ತಾಂತ್ರಿಕ ವಿಷಯದಲ್ಲಿ ಕನ್ನಡ ಭಾಷೆಯ ಪರಿಮಿತಿ, ತಂತ್ರಜ್ಞಾನದೊಂದಿಗೆ ಕನ್ನಡ ಭಾಷೆ ಸಮರ್ಥವಾಗಿ ತಳುಕುಹಾಕಿಕೊಂಡಿಲ್ಲ ಎಂಬುದನ್ನು ತೋರಿದವು. ಸಾಧ್ಯತೆಗಳಿಗೆ ತಕ್ಕ ತಯಾರಿ ಕನ್ನಡದಲ್ಲಿ ಒಳಗಿನಿಂದ ಆಗಿಲ್ಲ ಎಂಬುದು ಈಗಲೂ ಸತ್ಯ.

ಭಾಷಾ ಯೋಜನೆಯನ್ನು ಪ್ರತಿಯೊಂದು ಭಾಷೆಯ ಬೆಳವಣಿಗೆ ದೃಷ್ಟಿಯಿಂದಲೂ ಎಲ್ಲಾ ಭಾಷೆಯ ಸಮಾಜಗಳು ಅಳವಡಿಸಿಕೊಳ್ಳುತ್ತವೆ. ತಾಯ್ನುಡಿ ಹೇಗೆ ಬಳಕೆಯಾಗುತ್ತಿದೆ, ಬಳಕೆಯಲ್ಲಿ ಏನೇನು ಕೊರತೆಗಳಿವೆ ಎಂಬುದರ ಕುರಿತು ಒಂದು ವಿಸ್ತೃತ ಅಧ್ಯಯನ ಮಾಡಿ ಆ ಕೊರತೆ ನಿವಾರಣೆಗೆ ಸರ್ಕಾರ ಹಾಗೂ ಭಾಷೆಗೆ ಸಂಬಂಧಿಸಿದ ಸಂಸ್ಥೆಗಳು ಕೈಗೊಳ್ಳುವಂಥ ಒಂದು ನಿರ್ಧಾರ. ಆದರೆ ಭಿನ್ನ ಕಾಲಘಟ್ಟಗಳಲ್ಲಿ ನೋಡಿದರೆ, ಕನ್ನಡ ಭಾಷೆಯಲ್ಲಿ ಅಂಥ ಪ್ರಯತ್ನಗಳು ಸಾಕಷ್ಟು ನಡೆದಿಲ್ಲ. ನಾಗರೀಕ ಸಮಾಜದ ಒಳಗೊಳ್ಳುವಿಕೆಯಿಂದ ತಾಂತ್ರಿಕ ವಿಭಾಗಗಳಲ್ಲಿ ಕನ್ನಡ ಸೇವೆ ಪಡೆದ ಉದಾಹರಣೆಗಳಿದ್ದರೂ, ವಿರಳ. ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಸಿನಿಮಾ ಪಾತ್ರ ಬಹುಮುಖ್ಯವಾದದ್ದು. ರಾಜ್ಯ ಏಕೀಕರಣದ ಹಲವು ವರ್ಷಗಳ ನಂತರ ಡಬ್ಬಿಂಗ್‌ಗೆ ವಿರೋಧ ವ್ಯಕ್ತವಾಯಿತು. ಅದು ಆಗಿನ ಕಾಲಕ್ಕೆ ಸರಿಯಾದ ನಿರ್ಧಾರವೇ ಆಗಿತ್ತು. ಆದರೆ ಜಾಗತೀಕರಣದ ನಂತರ ಖಾಸಗಿ ಟೀವಿ ಚಾನಲ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದವು. ಕಾರ್ಟೂನ್ ಚಾನಲ್‌ನಿಂದ ಹಿಡಿದು ಡಿಸ್ಕವರಿಯಂಥ ದೊಡ್ಡ ದೊಡ್ಡ ಚಾನಲ್‌ಗಳನ್ನು ನೋಡುತ್ತಾ ಕುಳಿತ ಮಕ್ಕಳು ಕನ್ನಡಕ್ಕೆ ಅಂಟಿಕೊಳ್ಳದೇ ಬೆಳೆದರು, ಈ ವಿಷಯದಲ್ಲಿ ಈಗ ಒಟಿಟಿಯಲ್ಲಿ ತಕ್ಕಮಟ್ಟಿಗೆ ಬದಲಾವಣೆಗಳಾಗುತ್ತಿವೆ.

ಕರ್ನಾಟಕದ ಭಾಷಾ ದೃಷ್ಟಿಯಿಂದ 19ನೇ ಶತಮಾನ ಬಹುಮುಖ್ಯವಾದದ್ದು. ಸಾಕ್ಷರತಾ ಪ್ರಮಾಣ ಹೆಚ್ಚಿಸಲು ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರ ದೊಡ್ಡ ಮಟ್ಟದ ಹೂಡಿಕೆ ಮಾಡಿತು. ಇದರಿಂದ ಸರ್ಕಾರಿ ಶಾಲೆಗಳ ಸಂಖ್ಯೆ ಹೆಚ್ಚಾದವು. ಕನ್ನಡ ಮಾಧ್ಯಮದಲ್ಲಿ ಸಾರ್ವತ್ರಿಕ ಶಿಕ್ಷಣ ಸಾಧ್ಯವಾಯಿತು. ಅನಂತರ ಪ್ರಾಥಮಿಕ ಶಿಕ್ಷಣ ಕನ್ನಡದಲ್ಲಿ ನೆಲೆಗೊಂಡಿದ್ದನ್ನು ಶಿಥಿಲಗೊಳಿಸಿ ಇಂಗ್ಲಿಷ್ ಮುನ್ನೆಲೆಗೆ ಬಂದ ಬಹುಮುಖ್ಯ ಬದಲಾವಣೆಯನ್ನು ಮರೆಯಲು ಸಾಧ್ಯವೇ ಇಲ್ಲ.

ಈಗ ಭಾಷೆಯ ವರ್ತಮಾನದ ಬಗ್ಗೆ ಹೇಳುವುದಾದರೆ, ತಾಯ್ನುಡಿಯಲ್ಲಿ ಶಿಕ್ಷಣವನ್ನು ಗಟ್ಟಿ ಮಾಡುವುದರೊಂದಿಗೆ ತಾಂತ್ರಿಕ ಸಂಗತಿಗಳಲ್ಲಿ ಕನ್ನಡ ಭಾಷೆ ಚೆನ್ನಾಗಿ ಕಾಣಿಸಿಕೊಂಡರೆ ಮಾತ್ರ ಕನ್ನಡದೊಂದಿಗಿನ ಸಂಬಂಧ ಗಟ್ಟಿಯಾಗಿ ಮುಂದುವರೆಯುತ್ತದೆ. ಮುಂದಿನ ತಲೆಮಾರಿನಲ್ಲೂ ಕನ್ನಡದ ಪ್ರೀತಿ ಬೆಳೆಯುತ್ತದೆ. ■

ಕರ್ನಾಟಕ@50/ ಭಾಷೆ

# ಆ ಎಪ್ಪತ್ತರ ದಶಕ...



**ಕೆ. ಪುಟ್ಟಸ್ವಾಮಿ,**
ಸಿನಿಮಾ ವಿಮರ್ಶಕ

ಕರ್ನಾಟಕ ರಾಜ್ಯದ ಏಕೀಕರಣದ ನಂತರ ಕನ್ನಡ ಚಲನಚಿತ್ರೋದ್ಯಮದ ಬೆಳವಣಿಗೆಗೆ ಸಂಬಂಧಿಸಿದಂತೆ ನಾಲ್ಕು ವಿದ್ಯಮಾನಗಳು ನನಗೆ ಮುಖ್ಯವಾಗಿ ಕಾಣುತ್ತವೆ.

ಕನ್ನಡ ಚಿತ್ರರಂಗದ ಬೆಳವಣಿಗೆಗೆ ಮೊದಲು ಅಡಿಪಾಯ ಹಾಕಿದ್ದೇ ರಾಜ್ಯೋದಯ. ಹರಿದು ಹಂಚಿಹೋಗಿದ್ದ ಕರ್ನಾಟಕದ ಪ್ರದೇಶಗಳು ವಿಶಾಲ ಮೈಸೂರು ರಾಜ್ಯದಡಿಯಲ್ಲಿ ರಾಜಕೀಯವಾಗಿ ಒಂದುಗೂಡಿದ್ದು ಸಹಜವಾಗಿಯೇ ಕನ್ನಡ ಚಿತ್ರಗಳ ವಿತರಣೆಗೆ ನೆರವಾಯಿತು. ಹೆಚ್ಚು ಕಡಿಮೆ ಹಳೆಯ ಮೈಸೂರು ರಾಜ್ಯಕ್ಕೆ ಸೀಮಿತಗೊಂಡಿದ್ದ ಕನ್ನಡ ಚಿತ್ರರಂಗದ ಮಾರುಕಟ್ಟೆಯು ಏಕೀಕರಣದ ನಂತರ ನಿಧಾನವಾಗಿ ವಿಸ್ತರಿಸತೊಡಗಿದ್ದು 1956ರ ರಾಜ್ಯ ಪುನರ್ವಿಂಗಡಣೆಯ ನಂತರ ಎಂಬುದು ಚಾರಿತ್ರಿಕ ಸತ್ಯ. ಗದಗಿನ ಶ್ರೀನಿವಾಸ ಪಿಕ್ಚರ್ಸ್, ಹುಬ್ಬಳ್ಳಿಯ ಖ್ವಾದ್ರಿ ಎಂಟರ್‌ಪ್ರೈಸಸ್ ಆದಿಯಾಗಿ ಕನ್ನಡ ಚಿತ್ರರಂಗದ ಹಂಚಿಕೆ ಮತ್ತು ಪ್ರದರ್ಶನಕ್ಕೆ ಮುಂದೆಬಂದ ಅನೇಕ ವಿತರಣಾ ಸಂಸ್ಥೆಗಳು ನಿಧಾನವಾಗಿ ಕನ್ನಡ ಚಿತ್ರಗಳ ವಿತರಣೆಯನ್ನು ವಿಸ್ತರಿಸಿದವು. ಈ ಸಂಸ್ಥೆಗಳ ಸತತ ಪ್ರಯತ್ನದಿಂದ ಇಂದು ಉತ್ತರ ಕರ್ನಾಟಕದಲ್ಲಿ ಕನ್ನಡ ಚಿತ್ರರಂಗದ ಪ್ರದರ್ಶನ ಗಳಿಕೆ ಸಾಕಷ್ಟು ಸುಧಾರಿಸಿದೆ; ಪ್ರಮುಖ ಆದಾಯ ಮೂಲವಾಗಿಯೂ ಉತ್ತರ ಕರ್ನಾಟಕ ರೂಪುಗೊಂಡಿದೆ.

ಎರಡನೆಯ ಪ್ರಮುಖ ಸಂಗತಿ, 1954ರಲ್ಲಿ ಬೆಳ್ಳಿತೆರೆಗೆ ನಾಯಕನಾಗಿ ಆಗಮಿಸಿದ ‘ರಾಜ್‌ಕುಮಾರ್’ ಅವರು ಕನ್ನಡ ಚಲನಚಿತ್ರರಂಗದ ಒಳಬಲವಾಗಿ ಬೆಳೆದು ನಿಂತ ಅಚ್ಚರಿಯ ವಿದ್ಯಮಾನ. ಸೀಮಿತ ಸಂಖ್ಯೆಯಲ್ಲಿ ಚಿತ್ರಗಳನ್ನು ನಿರ್ಮಿಸುತ್ತಿದ್ದ ಕನ್ನಡ ಚಿತ್ರರಂಗದಲ್ಲಿ ಕೇವಲ ಹದಿನೈದು ವರ್ಷಗಳ ಅವಧಿಯಲ್ಲಿ ನೂರು ಚಿತ್ರಗಳಲ್ಲಿ ನಾಯಕನಟನಾಗಿ ಅಭಿನಯಿಸಿದ ಮತ್ತು ಕನ್ನಡ ಚಿತ್ರರಂಗದ ಮಾರುಕಟ್ಟೆಗೆ ಅಡಿಪಾಯ ಒದಗಿಸಿದ ಕಲಾವಿದರಾಗಿ ಬೆಳೆದದ್ದು ಪವಾಡ ಸದೃಶ ಸಂಗತಿ.

ಅರವತ್ತರ ದಶಕದುದ್ದಕ್ಕೂ ಘಟಿಸಿದ ಅನೇಕ ಸಾಂಸ್ಕೃತಿಕ ಚಟುವಟಿಕೆ, ಕನ್ನಡಪರ ಹೋರಾಟಗಳು ಮತ್ತು ಸರ್ಕಾರದ ಸಹಾಯಹಸ್ತ ಕನ್ನಡ ಚಲನಚಿತ್ರರಂಗ ಭದ್ರವಾಗಿ ತಳವೂರಲು ನೆರವಾದವು. ಕನ್ನಡ ಚಿತ್ರರಂಗಕ್ಕೆ

# ವಿಶ್ವಕ್ಕೆ ಕನ್ನಡ ಮಣ್ಣಿನ ಪರಿಸರ ಪಾಠ



**ಡಾ. ಕೇಶವ ಎಚ್ ಕೊರ್ಸೆ**
ಸಂರಕ್ಷಣಾ ಜೀವಶಾಸ್ತ್ರಜ್ಞ, ಶಿರಸಿ

ಈ 50 ವರ್ಷಗಳಲ್ಲಿ, ಪರಿಸರಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ತುಂಬಾ ಕಾನೂನುಗಳು ಬಂದಿವೆ. ವನ್ಯಜೀವಿ ಕಾಯ್ದೆ, ಅರಣ್ಯ ಕಾಯ್ದೆ, ಜೀವವೈವಿಧ್ಯ ಕಾಯ್ದೆ ಹೀಗೆ ಅರಣ್ಯ ಹಾಗೂ ಪರಿಸರವನ್ನು ಕೇಂದ್ರೀಕರಿಸಿ ಕಾನೂನು, ವಿಧಿನಿಷೇಧಗಳು ಹೆಚ್ಚಿನ ಸಂಖ್ಯೆಯಲ್ಲಿ ಜಾರಿಗೆ ಬಂದಿವೆ.

ಪರಿಸರಕ್ಕೆ ಸಂಬಂಧಿಸಿದಂತೆ ಜನಪರ ಚಳವಳಿಗಳೂ ಕಡಿಮೆಯೇನಿಲ್ಲ. 80ರ ದಶಕದಲ್ಲಿ ಉತ್ತರ ಕನ್ನಡ ಜಿಲ್ಲೆಯ ಬೇಡ್ತಿ ನದಿ ಅಣೆಕಟ್ಟಿನ ಸಂಬಂಧ ನಡೆದ ಚಳವಳಿ ದೇಶದಲ್ಲೇ ಅಣೆಕಟ್ಟಿನ ವಿರುದ್ಧ ನಡೆದ ಬೃಹತ್ ಜನಪರ ಚಳವಳಿ ಎಂದು ಕರೆಸಿಕೊಂಡಿತು. ಪರಿಸರದ ವಿಷಯವಾಗಿ ಕರ್ನಾಟಕದಲ್ಲಿ ಹೆಗ್ಗುರುತಾಗಿ ಉಳಿಯಿತು.

ಜನಪರ ಚಳವಳಿಗಳ ಪಟ್ಟಿಯಲ್ಲಿ ಸೈಲೆಂಟ್ ವ್ಯಾಲಿ ಚಳವಳಿ, ಕೈಗಾ